**3. ಕೆ.ಆರ್. ಪೇಟೆ ಕಬಳೀಗೆರೆಯಲ್ಲಿ ಪ್ರೇಮಮ್ಮ ಎನ್ನುವವರಿಂದ ಮೈಸೂರಿನ ಚೆಲುವಾಂಬ ಆಸ್ಪತ್ರೆಯ ವೈದ್ಯರ ವಿರುದ್ಧ ದೂರು.**

ಶ್ರೀ ಸಿ.ಎಸ್. ಪುಟ್ಟೇಗೌಡ (ಚನ್ನರಾಯಪಟ್ಟಣ) : ಮಾನ್ಯ ಸಭಾಧ್ಯಕ್ಷರೆ, ನಮ್ಮ ಪಕ್ಷದ ಕ್ಷೇತ್ರವಾದ ಕೆ.ಆರ್. ಪೇಟೆ ಕಬಳೀಗೆರೆಯಲ್ಲಿ ಪ್ರೇಮಮ್ಮ ಅನ್ನುವವರು ಚೆಲುವಾಂಬ ಆಸ್ಪತ್ರೆಯಲ್ಲಿ ಬಹುಶ: ಒಂದೂವರೆ ವರ್ಷದಿಂದ ಅಲ್ಲಿ ಪೇಷೆಂಟ್ ಆಗಿದ್ದರು. ಅವರು ತಿಂಗಳಿಗೆ ಒಂದುಸಾರಿ ಆಸ್ಪತ್ರೆಗೆ ಬಂದು ತಪಾಸಣೆ ಮಾಡಿಸಿಕೊಳ್ಳಬೇಕೆಂದು ಹೇಳಿದಂತಹ ಡಾ. ಚಂದ್ರಶೇಖರ್‌ರವರು ಕೊನೆಗೆ ಒಂದೂವರೆ ವರ್ಷ ಸುತ್ತಿಸಿ ನಿಮಗೆ ಆಪರೇಷನ್ ಮಾಡಬೇಕೆಂದು ಹೇಳಿ ಅವರನ್ನು ಬೆಂಗಳೂರಿನ ವಿಕ್ಟೋರಿಯ ಆಸ್ಪತ್ರೆಗೆ ಕರೆದುಕೊಂಡು ಬಂದು ಒಂದೂವರೆ ದಿವಸ ನಿಮಗೆ ಆಪರೇಷನ್ ಮಾಡಿದ್ದೇವೆ ಎಂದು ಹೇಳಿದ್ದಾರೆ. ಆಯಮ್ಮನಿಗೆ 25,000 ರೂಪಾಯಿ ದುಡ್ಡು ಕೂಡ ಕೊಟ್ಟಿದ್ದಾರೆ. ಆಯಮ್ಮನ ಜೊತೆಗೆ ಬಹುಶ: 10-17 ಜನರನ್ನು ಕರೆದುಕೊಂಡು ಹೋಗಿದ್ದರು. ಎಂದು ಆಯಮ್ಮ ದೂರು ಕೊಟ್ಟಿದ್ದಾರೆ ಆ 17 ಜನರನ್ನು ಏತಕ್ಕೆ ಕರೆದುಕೊಂಡು ಹೋಗಿದ್ದರು ಎಂದು ಆಕೆಗೆ ಗೊತ್ತಿಲ್ಲ. ಬೆಳಿಗ್ಗೆ ಆಯಮ್ಮ ಎದ್ದು ಬರಬೇಕಾದರೆ ಆಯಮ್ಮನ ಹತ್ತಿರ ಇದ್ದ ದುಡ್ಡನ್ನು ಅಪಹರಿಸಿದ್ದಾರೆ. ಕೊನೆಗೆ ಮೈಸೂರು ಸರಸ್ವತಿಪುರಂ ಪೋಲಿಸ್ ಠಾಣೆಗೆ ಬಂದು ದೂರು ಕೊಟ್ಟಾಗ ಪೋಲಿಸರಿಗೆ ಅನುಮಾನ ಬಂದು ಅವರನ್ನು ಒಬ್ಬ ಡಾಕ್ಟರ್ ಹತ್ತಿರ ಕರೆದುಕೊಂಡು ಹೋಗಿ, ಚೆಕ್ ಅಪ್ ಮಾಡಿಸಿ, ಚಂದ್ರಶೇಖರ್ ಡಾಕ್ಟರ್ ಜೊತೆ ಇಂಗ್ಲೀಷಿನಲ್ಲಿ ಮಾತನಾಡಿದರು, ಏನು ಮಾತನಾಡಿದರು ಎಂದು ಗೊತ್ತಿಲ್ಲ. ಕೊನೆಗೆ ಆ ಡಾಕ್ಟರ್ ಕೂಡ ನಿಮಗೆ ಕಿಡ್ನಿ ಇಲ್ಲ ತೆಗೆದು ಹಾಕಿದ್ದಾರೆ ಹಾಕಿಸಿ ಕೊಡುತ್ತೇವೆ ಯಾರಿಗೂ ಹೇಳಬೇಡ ಎಂದು ಆಯಮ್ಮನನ್ನು ಸಂತೈಸುವುದಕ್ಕೆ ನೋಡಿದರು. ಆದರೆ ಅದು ಆಗಲಿಲ್ಲ. ಇಂತಹ ಕೆಲಸ ಆಗಬಾರದು. ಏಕೆಂದರೆ ಹಿಂದೆ ಇದರ ಬಗ್ಗೆ ಬಹಳ ದೂರು ಕೇಳಿ ಬಂದು ಹಿಂದೆ ಕಿಡ್ನಿ ಅಪಹರಿಸುತ್ತಾರೆ ಅನ್ನತಕ್ಕಂತಹ ದೂರು ರಾಜ್ಯದಲ್ಲಿ ವ್ಯಾಪಕವಾಗಿತ್ತು. ಈಗ ಇಂಥದ್ದೇ ಒಂದು ಪ್ರಕರಣ ನಮ್ಮ ಪಕ್ಕದ ಕೆ.ಆರ್. ಪೇಟೆ ತಾಲ್ಲೂಕಿನಲ್ಲಿ ನಡೆದಿದೆ. ಈ ಪ್ರಕರಣದ ಬಗ್ಗೆ ಆಯಮ್ಮ ಸರ್ಕಾರಕ್ಕೆ ದೂರು ಕೊಟ್ಟಿದ್ದಾರೆ.

1.20. ಪಿ.ಎಂ.

ದಯಮಾಡಿ ಇದರ ಬಗ್ಗೆ ಪರಿಶೀಲನೆ ಮಾಡಿ. ತಾಲ್ಲೂಕು ಹೆಡ್ ಕ್ವಾರ್ಟರ್ಸನಲ್ಲಿ ಯಾವುದೇ ಡಾಕ್ಟರ್‌ಗಳು ಇಲ್ಲದಿರುವುದರಿಂದ ಆಸ್ಪತ್ರೆಗಾಗಿ ಹಳ್ಳಿಗರು ಸಿಟಿಗೆ ಬರುವಂಥ ಪರಿಸ್ಥಿತಿಯಾಗಿದೆ. ಇವೊತ್ತು ನಗರ ಪ್ರದೇಶಗಳಲ್ಲಿ ಕೂಡ ಡಾಕ್ಟರ್‌ಗಳ ಅಭಾವ ಇದೆ. ಆದಕಾರಣ ಯಾವ ರೀತಿ ಹಳ್ಳಿಗಳಲ್ಲಿ ಕಾಂಟ್ರಾಕ್ಟ್ ಬೇಸಿಸ್ ಮೇಲೆ ಡಾಕ್ಟರ್ಸ್‌ನ್ನು ಹಾಕಿದ್ದಾರೆ, ಅದೇ ರೀತಿ ನಗರ ಪ್ರದೇಶಗಳಲ್ಲಿ ಕೂಡ ಡಾಕ್ಟರ್‌ಗಳ ಅಭಾವವಿದೆ, ಅವರ ಹುದ್ದೆಗಳನ್ನು ತುಂಬಬೇಕು. ಮತ್ತು ಈ ಪ್ರೇಮಮ್ಮ ದೂರು ಕೊಟ್ಟಿರುವ ಬಗ್ಗೆ ಸರಿಯಾದಂಥ ಒಂದು

ಎನ್‌ಕ್ವಾಯರಿಯನ್ನು ಮಾಡಿ ತಪ್ಪಿತಸ್ಥರಿಗೆ ಸರಿಯಾದಂಥ ಶಿಕ್ಷೆಯಾಗಬೇಕೆಂದು ಸಭೆಯ ಗಮನಕ್ಕೆ ಹಾಗೂ ಸರ್ಕಾರದ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಸಿ. ಭೈರೇಗೌಡ : ಮಾನ್ಯ ಅಧ್ಯಕ್ಷರೆ, ಇಡೀ ದೇಶದ ಹಾಗೂ ರಾಜ್ಯದ ಕಣ್ಣನ್ನು ತೆಗೆಸತಕ್ಕಂಥ ಮೂತ್ರಪಿಂಡ ವ್ಯವಹಾರಗಳು ನಮ್ಮಲ್ಲಿ ನಡೆದಿವೆ. ಅದರ ಬಗ್ಗೆ ವ್ಯಾಪಕವಾಗಿ ಈ ಸದನದಲ್ಲಿ ಚರ್ಚೆಯಾಗಿದೆ. ಚರ್ಚೆಯಾಗಿ ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳುವಂಥ ಕ್ರಮ ಕೂಡ ಜರಗುತ್ತಿದೆ. ವೈದ್ಯರ ಸಮಿತಿಯನ್ನು ಮಾಡಿ ಆ ಸಮಿತಿಯ ಮೂಲಕ ಯಾರು ಡೋನರ್, ಯಾರಿಗೆ ಯಾರು ಕಿಡ್ನಿ ಕೊಡಬೇಕು ಎನ್ನತಕ್ಕಂಥದ್ದರ ಬಗ್ಗೆ ನಿಯಮಾವಳಿಗಳನ್ನು ಕೂಡ ರಚಿಸತಕ್ಕಂಥ ಕೆಲಸವಾಗಿದೆ. ಅದಕ್ಕೆ ತದ್ವಿರುದ್ಧವಾದ ರೀತಿಯಲ್ಲಿ ಈ ಪ್ರಕರಣ ನಡೆದಿದೆ ಎನ್ನತಕ್ಕಂಥ ಆಪಾದನೆಯನ್ನು ಮಾನ್ಯ ಸದಸ್ಯರು ಇವೊತ್ತು ಈ ಸದನದಲ್ಲಿ ಮಾಡಿದ್ದಾರೆ. ಅದು ನಡೆದಿದ್ದರೆ ಪೂರ್ಣವಾಗಿರತಕ್ಕಂಥ ಅಪರಾಧವಾಗುತ್ತದೆ. ಅದರ ಸತ್ಯಾಸತ್ಯತೆಯನ್ನು ಅರಿತು ಅಂತಹ ಘಟನೆ ನಡೆದಿದ್ದರೆ ತಪ್ಪಿತಸ್ಥರ ಮೇಲೆ ಖಂಡಿತವಾಗಿ ನಿಯಮಾವಳಿಗಳ ಪ್ರಕಾರ ಕಾನೂನು ಕ್ರಮವನ್ನು ಸರ್ಕಾರ ತೆಗೆದುಕೊಳ್ಳುತ್ತದೆಂಬ ಭರವಸೆಯನ್ನು ನಾನು ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ.

## 4. ಮೈಸೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಭೆಯಲ್ಲಿ ನಡೆದ ಗಲಭೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಸನ್ಮಾನ್ಯ ಅಧ್ಯಕ್ಷರೇ, ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಂಬಂಧಪಟ್ಟ ಹಾಗೆ ನಾನು ಮೊನ್ನೆ ಕೂಡ ಪ್ರಸ್ತಾಪ ಮಾಡಿದ್ದೆ. ನಾನು ಪ್ರಸ್ತಾಪ ಮಾಡಿದ ಮೇಲೆ ಒಂದು ಘಟನೆ ನಡೆದಿದೆ. ದಿನಾಂಕ 2-3-1996ರಂದು ಮೈಸೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಭೆಯಲ್ಲಿ ಕೆಲವು ವಿಷಯಗಳಿಗೆ ಸಂಬಂಧಪಟ್ಟ ಹಾಗೆ ಚರ್ಚೆ ನಡೆದ ಸಂದರ್ಭದಲ್ಲಿ ಮುಖ್ಯವಾಗಿ ಪ್ರೊ|| ರಾಮದಾಸ್ ಮತ್ತು ಗೋವಿಂದಯ್ಯ ಚರ್ಚೆ ಮಾಡತಕ್ಕಂಥ ಸಂದರ್ಭದಲ್ಲಿ ಗದ್ದಲವಾಗಿ ಅಲ್ಲಿನ ವೈಸ್ ಚಾನ್ಸಲರ್ ಸಿಂಡಿಕೇಟ್ ಸದಸ್ಯರ ಮೇಲೆ ಕೈ ಮಾಡಿ, ಬೇರೆಯವರಿಂದ ಕೈ ಮಾಡಿಸಿ ಆತನೇ ಸರಸ್ವತಿಪುರಂ ಪೋಲೀಸ್ ಸ್ಟೇಷನ್‌ನಲ್ಲಿ ಅವರಿಬ್ಬರ ಮೇಲೆ ಪೋಲೀಸ್ ಕಂಪ್ಲೇಂಟ್ ಕೊಡಿಸಿ ಎಲೆಕ್ಟೆಡ್ ಸಿಂಡಿಕೇಟ್ ಮೆಂಬರ್ಸ್‌ನ್ನು ಬಂಧನ ಮಾಡಿಸಿ ಅವರ ಮೇಲೆ ಕ್ರಿಮಿನಲ್ ಮೊಕದ್ದಮೆ ಹೂಡಿರತಕ್ಕಂಥ ಘಟನೆ ಏನು ನಡೆದಿದೆ ಇದು ಇಡೀ ವಿಶ್ವವಿದ್ಯಾನಿಲಯದ ಗೌರವಕ್ಕೆ ಧಕ್ಕೆ ಬರತಕ್ಕಂಥ ಘಟನೆ. ಇಡೀ ದೇಶದಲ್ಲಿ ಅತ್ಯುನ್ನತ ಭವ್ಯ ಪರಂಪರೆಯನ್ನು ಹೊಂದಿರತಕ್ಕಂಥ ವಿಶ್ವವಿದ್ಯಾನಿಲಯ ಎಂದರೆ ಮೈಸೂರು ವಿಶ್ವವಿದ್ಯಾನಿಲಯ. ಆ ವಿಶ್ವವಿದ್ಯಾನಿಲಯದ ಕುಲಪತಿಗಳು ಇವೊತ್ತು ಇಡೀ ವಿಶ್ವವಿದ್ಯಾನಿಲಯದ ಗೌರವಕ್ಕೆ ಧಕ್ಕೆ ತರತಕ್ಕಂಥ ಸ್ಥಿತಿಗೆ ಕಾರಣರಾಗಿದ್ದಾರೆ. ಅದರ ಜೊತೆಗೆ 11ನೇ ತಾರೀಖು ನಡೆಯ ಬಹುದಾದಂಥ ಸಿಂಡಿಕೇಟ್ ಸಭೆಯಲ್ಲಿ ಅವರಿಬ್ಬರನ್ನು ಸಸ್ಪೆಂಡ್ ಮಾಡತಕ್ಕಂಥ ತೀರ್ಮಾನವಾಗತಕ್ಕಂಥಾದ್ದಿದೆ ಆದರೆ ಅವರಿಬ್ಬರನ್ನು ಸಸ್ಪೆಂಡ್ ಮಾಡತಕ್ಕಂಥದ್ದು ಸಂಪೂರ್ಣವಾಗಿ ತಪ್ಪು. ಅವರು ಸಸ್ಪೆಂಡ್ ಮಾಡತಕ್ಕಂಥ ಯಾವುದೇ